# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

## ಯಲಹಂಕ ವಲಯ

### ಸಹಾಯಕ ಕಾರ್ಯಪಾಲಕ ಅಭಿಯಂತರರು ಕಛೇರಿ, ಯಲಹಂಕ ಉಪ ವಿಭಾಗ

### ವಾರ್ಡ್ ನಂ. 02 (ಚೌಡೇಶ್ವರಿ) ವಾರ್ಡ್ ಕಮಿಟಿ ಸಭೆ.

ದಿನಾಂಕ: 06-3-2021 ರಂದು ಬೆಳ್ಳಿಗೆ 11.00 ಗಂಟೆಗೆ ವಾರ್ಡ್ ನಂ-02 ಚೌಡೇಶ್ವರಿ ವಾರ್ಡ್ ಸಮಿತಿಯ ಮಾನ್ಯ ನೋಡೆಲ್ ಅಧಿಕಾರಿಗಳು ಹಾಗೂ ಕಾರ್ಯದರ್ಶಿಗಳು ಜೊತೆ ಯಲಹಂಕ ವಿಭಾಗ ಕಚೇರಿಯಲ್ಲಿರುವ ವಾರ್ಡ್ ಕಛೇರಿಯಲ್ಲಿ ನೆಡೆದ ವಾರ್ಡ್ ಕಮಟಿ ಸಭೆಯ ನಡುವಳಿಗಳು

| ಕ್ರ.ಸಂ | ಸಭೆಗೆ ಹಾಜರಾಗಿರುವ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು | ಸಭೆಗೆ ಹಾಜರಾಗಿರುವ ಅಧಿಕಾರಿಗಳು | ಷರಾ |
|---|---|---|---|
| 1 | ಶ್ರೀ.ಅಶೋಕ್ ಪಾಟೀಲ್ ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ನೋಡೆಲ್ ಅಧಿಕಾರಿಗಳು. | ಶ್ರೀ.ಚಂದ್ರಶೇಖರ್ (ಅಸೆಸರ್) | |
| | | ಶ್ರೀ.ಲಿಂಗರಾಜು (ಹಿ.ಆ.ಪ) | |
| 2 | ಶ್ರೀ.ಚಂದ್ರಕಾಂತ್ ರಾಜ್ ಪಿ.ಎ ಸಹಾಯಕ ಅಭಿಯಂತರರು ಹಾಗೂ ಸಮಿತಿ ಕಾರ್ಯದರ್ಶಿ | ಶ್ರೀ. ಶಶಿಕುಮಾರ್ (ಬಿ.ಡಬ್ಲ್ಯೂ.ಎಸ್.ಎಸ್.ಬಿ) | |
| | | ಶ್ರೀ.ಸುಂದರೇಶ್ (ಸ.ಅ)(ಯೋಜನೆ) | |
| | | ಶ್ರೀ.ಚಂದ್ರಪ್ಪ (ಅರಣ್ಯ ಇಲಾಖೆ) | |

ಶ್ರೀ. ಚಂದ್ರಕಾಂತ್‌ರಾಜ್ ಪಿ.ಎ ಸಹಾಯಕ ಅಭಿಯಂತರರು ವಾರ್ಡ್ ನಂ -02 ಹಾಗೂ ಕಾರ್ಯದರ್ಶಿಗಳು ವಾರ್ಡ್ ಸಮಿತಿ ರವರು ಸಭೆಗೆ ಹಾಜರಿದ್ದ ನೋಡೆಲ್ ಅಧಿಕಾರಿಗಳು ಹಾಗೂ ಬಾಗವಹಿಸಿದ್ದ ಎಲ್ಲಾ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ ಸಭೆ ಪ್ರಾರಂಭಿಸಲು ನೋಡೆಲ್ ಅಧಿಕಾರಿರವರನ್ನು ಕೋರಲಾಯಿತು ಮತ್ತು ಸಬೆಯಲ್ಲಿ ಚರ್ಚಿಸಬೇಕಾದ ವಿಷಯಗಳ ಬಗ್ಗೆ ತಿಳಿಸಲಾಯಿತು.

ಶ್ರೀ ಅಶೋಕ್ ಪಾಟೀಲ್, ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಸಮಿತಿಯ ನೋಡೆಲ್ ಅಧಿಕಾರಿಯವರು ಸಬೆಯನ್ನು ಪ್ರಾರಂಭಿಸಿದರು.

| ಕ್ರ.ಸಂ | ವಿಷಯ ಸೂಚಿ | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|
| 01 | ವಾರ್ಡ್ ನಂ-02ರ ವ್ಯಾಪ್ತಿಯಲ್ಲಿರುವ ಕಾಮಾಕ್ಷಮ್ಮ ಬಡಾವಣೆ 1ನೇ ಮುಖ್ಯರಸ್ತೆ 3ನೇ ಅಡ್ಡರಸ್ತೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಚೇಂಬರ್ ಬ್ಲಾಕ್ ಆಗಿದ್ದು, ಶ್ರೀ. ಮುನಿಕೃಷ್ಣಪ್ಪ ನವರ ಮನೆ ಮುಂದೆ ಇರುವ ಚೆಂಬರ್‌ಅನ್ನು ತೆಗೆದು ಸ್ವಚ್ಚಗೊಳಿಸುವಂತೆ ಸ್ಥಳಿಯದಾರದ ಶೀ.ಎ.ಎಸ್.ರಾಜು ರವರು ಸಭೆಯಲ್ಲಿ ಕೋರಿದರು. | ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಹಾಯಕ ಅಭಿಯಂತರರಾದ ಶ್ರೀ. ಶಶಿಕುಮಾರ್ ರವರಿಗೆ ಸ್ಥಳದಲ್ಲಿ ಪರೀಶಿಲನೆ ಮಾಡಿ ಸೂಕ್ತ ಕ್ರಮ ಕೈಗೊಳ್ಳುವಂತೆ ನೋಡೆಲ್ ಅಧಿಕಾರಿಗಳು ತಿಳಿಸಿದರು. | ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ) |
| 02 | ವಾರ್ಡ್ ನಂ -02ರ ವ್ಯಾಪ್ತಿಯಲ್ಲಿರುವ ರೈಲ್ವೆ ಸ್ಟೇಷನ್ ರಸ್ತೆಯಲ್ಲಿ ಸಾರ್ವಜನಿಕ ಶೌಚಾಲಯವನ್ನು ನಿರ್ಮಾಣ ಮಾಡಿಕೊಡಲು ಶ್ರೀ.ಎ.ಎಸ್. ರಾಜು ರವರು ಸಭೆಯಲ್ಲಿ ಕೋರಿದರು. | ಸಹಾಯಕ ಅಭಿಯಂತರರು ವಾರ್ಡ್ ನಂ-02 ರವರಿಗೆ ಸ್ಥಳದಲ್ಲಿ ಪರೀಶಿಲನೆ ಮಾಡಿ ಸೂಕ್ತ ಕ್ರಮ ಕೈಗೊಳ್ಳುವಂತೆ ನೋಡೆಲ್ | ಸಹಾಯಕ ಅಭಿಯಂತರರು (ವಾರ್ಡ್ -02) |

| | | | |
|---|---|---|---|
| | | ಅಧಿಕಾರಿಗಳು ತಿಳಿಸಿದರು. | |
| 03 | ವಾರ್ಡ್ ನಂ-02ರ ವ್ಯಾಪ್ತಿಯಲ್ಲಿರುವ ನಾಗಾರ್ಜುನ ವಸತಿ ಸಂಕೀರ್ಣ ಆರ್.ಒ.ಪ್ಲಾಂಟ್ ಹತ್ತಿರ ಎಸ್.ಎನ್.ಕೆ ಫ್ಯಾಕ್ಟರಿ ಹತ್ತಿರ ಯಲಹಂಕ ನ್ಯೂ ಟೌನ್ 5ನೇ ಹಂತ ಇಲ್ಲಿ ವಿದ್ಯುತ್ ತಂತಿಗಳು ಜೋತು ಬಿದ್ದಿದ್ದು, ಸದರಿ ವಿದ್ಯುತ್ ತಂತಿಗಳಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿದ್ದು, ಕೂಡಲೇ ಸರಿಪಡಿಸಿಕೊಡಬೇಕೆಂದು ಶ್ರೀ.ಕಲ್ಲಪ್ಪ ನಾಗಡಿಯವರು ಸಭೆಯಲ್ಲಿ ಕೋರಿದರು. | ನೋಡೆಲ್ ಅಧಿಕಾರಿಗಳು ಬೇಸ್ಕಾಂ ಅಧಿಕಾರಿಗಳುಗೆ ತಿಳಿಸುವುದಾಗಿ ಸಭೆಯಲ್ಲಿ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೇಸ್ಕಾಂ ಇಲಾಖೆ) |
| 04 | ವಾರ್ಡ್ ನಂ-02ರ ನಾಗೇನಹಳ್ಳಿ ಗ್ರಾಮದಲ್ಲಿ ಸುಮಾರು 3 ತಿಂಗಳಿಂದ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯವರು ರಸ್ತೆ ಅಗೆದಿದ್ದು, ರೆಸ್ಟೋರೇಷನ್ ಮಾಡಿರುವುದಿಲ್ಲ ಎಂದು ಸ್ಥಳಿಯದಾರದ ಶೀ.ಶಿವಕುಮಾರ್ ಎನ್ ರವರು ಸಭೆಯಲ್ಲಿ ಕೋರಿದರು. | ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಹಾಯಕ ಅಭಿಯಂತರರಾದ ಶ್ರೀ. ಶಶಿಕುಮಾರ್ ರವರಿಗೆ ಸ್ಥಳದಲ್ಲಿ ಪರೀಶಿಲನೆ ಮಾಡಿ ಸೂಕ್ತ ಕ್ರಮ ಕೈಗೊಳ್ಳುವಂತೆ ನೋಡೆಲ್ ಅಧಿಕಾರಿಗಳು ತಿಳಿಸಿದರು. | ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ) |
| 05 | ದಿನಾಂಕ: 7-3-2021 ಮತ್ತು 8-3-2021 ರಂದು ವಾರ್ಡ್‌ನಂ-02 ರ ವ್ಯಾಪ್ತಿಯಲ್ಲಿರುವ ಸಮುದಾಯ ಭವನ ಕಟ್ಟಡದಲ್ಲಿ ವಿಶ್ವವಾಣಿ ಪೌಂಡೆಷನ್ ವತಿಯಿಂದ ಉಚಿತಾ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಿದ್ದು, ಸದರಿ ದಿನಗಳಂದು ಸಮುದಾಯ ಭವನವನ್ನು ಸ್ವಚ್ಚಗೊಳಿಸಿ ಕೊಡಬೇಕೆಂದು ಶ್ರೀ.ಎ.ಎಸ್.ರಾಜು ರವರು ಸಭೆಗೆ ಕೋರಿದರು. | ನೋಡೆಲ್ ಅಧಿಕಾರಿಗಳು ಸಮುದಾಯ ಭವನವನ್ನು ಸ್ವಚ್ಚಗೊಳಿಸಲು ಪೌರ ಕಾರ್ಮಿಕರಿಗೆ ತಿಳಿಸುವಂತೆ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿದರು. | ಕಿರಿಯ ಆರೋಗ್ಯ ಪರಿವೀಕ್ಷಕರು (ಆರೋಗ್ಯ ಇಲಾಖೆ) |

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಯಿತು, ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

8/03/2021
ಕಾರ್ಯದರ್ಶಿ
ವಾರ್ಡ್ ಕಮಿಟಿ, ವಾರ್ಡ್ ನಂ. 02( ಚೌಡೇಶ್ವರಿ)

08/03
ನೋಡೆಲ್ ಅಧಿಕಾರಿಗಳು
ವಾರ್ಡ್ ಕಮಿಟಿ, ವಾರ್ಡ್ ನಂ. 02(ಚೌಡೇಶ್ವರಿ)

ಪ್ರತಿಯನ್ನು:

1. ಮಾನ್ಯ ಜಂಟಿ ಆಯುಕ್ತರು ಯಲಹಂಕ ವಲಯರವರ ಮಾಹಿತಿಗಾಗಿ.
2. ಮಾನ್ಯ ಮುಖ್ಯ ಅಭಿಯಂತರರು ಯಲಹಂಕ ವಲಯರವರ ಮಾಹಿತಿಗಾಗಿ.
3. ಆರೋಗ್ಯ ವೈದ್ಯಾಧಿಕಾರಿಗಳು ಯಲಹಂಕ ವಲಯರವರ ಮಾಹಿತಿಗಾಗಿ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು, (ವಿದ್ಯುತ್) ಯಲಹಂಕ ವಲಯ ರವರ ಮಾಹಿತಿಗಾಗಿ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ಯಲಹಂಕ ವಿಭಾಗ ರವರ ಮಾಹಿತಿಗಾಗಿ.
6. ಕಛೇರಿ ಕಡತಕ್ಕೆ.